









ಸುಲ್ತಾನ್ ತಮ್ಮ ರಾಜಧಾನಿಯನ್ನಾಗಿಸಿ ಆಳ್ವಿಕೆ ನಡೆಸಿದ ಇತಿಹಾಸ ಪ್ರಸಿದ್ಧ ಸ್ಥಳ. ಅಂದು ನಿರ್ಮಿತವಾಗಿರುವ ಜಾಮೀಯಾ ಮಸೀದಿ, ಟಿಪ್ಪುವಿನ ಬೇಸಿಗೆ ಅರಮನೆ, ದರಿಯಾ ದೌಲತ್, ಗುಂಬಜ್, ಫ್ರೆಂಚ್ ಪಾದ್ರಿ ನಿರ್ಮಿಸಿರುವ ಅಬ್ಬೆದುಬೆ ಇಗರ್ಜಿ ಮುಂತಾದ ಹಳೆಯ ಕಟ್ಟಡಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿವೆ.

ಈ ಐತಿಹಾಸಿಕ ಶ್ರೀರಂಗಪಟ್ಟಣದಲ್ಲೇ ತಲೆಯೆತ್ತಿದೆ ‘ಕೆಫೆ ಗ್ಯಾರೇಜ್’ ಎಂಬ ಹೋಟೆಲ್. ಇಲ್ಲಿಗೆ ಹೋಗಿ ಒಂದು ಕಾಫಿ ಹೀರುತ್ತಾ ಸುತ್ತಲಿನ ಪರಿಸರ ನೋಡಿದರೆ ಎಂತಹ ಕಲಾಪ್ರೇಮಿಗಳೂ ಥ್ರಿಲ್ ಆಗುತ್ತಾರೆ. ಮೋಟಾರ್ ವಾಹನಗಳಿಗೆ ಸಂಬಂಧಿಸಿದ ಹಳೆಯ ವಸ್ತುಗಳನ್ನು ಹೇಗೆ ಅಲಂಕಾರಿಕವಾಗಿ ಬಳಸಿಕೊಳ್ಳಬಹುದು ಎಂಬುದು ಅರಿವಾಗುತ್ತದೆ.

ಕೆಫೆಗೆ ಪ್ರವೇಶಿಸಿದಂತೆಯೇ ಗೋಡೆಯ ಮೇಲ್ಭಾಗ ಟೈರ್‌ಗಳು ಕಾಣಿಸಿಕೊಳ್ಳುತ್ತವೆ. ಅವು ಬರಿ ಟೈರ್‌ಗಳಲ್ಲ, ಆ ಟೈರ್‌ಗಳಲ್ಲಿ ಹಲವಾರು ರೀತಿಯ ಗಿಡಗಳಿವೆ. ಅವು ನಮ್ಮ ಗಮನ ಸೆಳೆಯುತ್ತವೆ. ಅಲ್ಲಿನ ಉದ್ಯಾನದಲ್ಲಿ ಹಳೆಯ ಕಾರಿನ ವ್ಹೀಲ್ ಡಿಸ್ಕ್‌ಗಳಿಂದ ವಿದ್ಯುತ್ ದೀಪಗಳನ್ನು ಅಳವಡಿಸಿರುವುದು, ಮೂರು ಚಕ್ರದ ಹಳೆಯ ಕಾಲದ ಸೈಕಲ್ ಹೂವಿನ ಕುಂಡವನ್ನು ಹೊತ್ತುಕೊಂಡಿರುವುದು, ದೂರದಲ್ಲಿ ಪರಿಸರದ ನಡುವೆ ಕಾರು ನಿಂತಿರುವುದು, ಮರದ ಬುಡದಲ್ಲಿ ಬಣ್ಣಬಣ್ಣದ ಕಾರ್ ಟೈರ್‌ಗಳಲ್ಲಿ ಅಲಂಕಾರಿಕ ಗಿಡಗಳನ್ನು ನೆಟ್ಟಿರುವುದು– ಒಂದಕ್ಕಿಂತ ಒಂದು ಕಣ್ಮನ ಸೆಳೆಯುತ್ತದೆ.

ಕೆಫೆಯ ಮೆಟ್ಟಿಲು ಹತ್ತಲು ಹೋಗುವಾಗ ಮಾರುತಿ 800 ಅರ್ಧಭಾಗ ಗೋಡೆಗೆ ಅಂಟಿಕೊಂಡಂತೆ ಕಾಣುತ್ತದೆ. ಕಬ್ಬಿಣದ ಮೆಟ್ಟಿಲುಗಳಿಗೆ ಅಳವಡಿಸಿರುವ ಸೈಕಲ್ ಚಕ್ರಗಳು, ತ್ರಿಚಕ್ರದ ಆಟೋರಿಕ್ಷಾ ಮಕ್ಕಳನ್ನು ಆಕರ್ಷಿಸುತ್ತವೆ. ಒಳಹೋದಂತೆ ಹಳೆಯ ಸ್ಕೂಟರ್‌ಗಳ ಸೀಟಿನ ಭಾಗವನ್ನು ಅಳವಡಿಸಿಕೊಂಡು ಡೈನಿಂಗ್ ಟೇಬಲ್ ಮಾಡಿರುವುದು, ಗೋಡೆಗೆ ಸ್ಕೂಟರ್, ಜೀಪ್ ಹಾಗೂ ಸೈಕಲ್‌ಗಳನ್ನು ಅಳವಡಿಸಿರುವುದು ನೋಡುಗರನ್ನು ಮುದಗೊಳಿಸುತ್ತದೆ.

ಇವುಗಳು ಪ್ರತಿಕೃತಿಗಳಲ್ಲ. ಹಳೆಯ ವಸ್ತುಗಳಿಗೆ ಜೀವ ತುಂಬಿ ನೈಜವಾಗಿ ಅಳವಡಿಸಿರುವ ಕಲೆ.

ಈ ಕೆಫೆಗೆ ಹೋಗಬೇಕಾದರೆ ಶ್ರೀರಂಗಪಟ್ಟಣದಿಂದ ಮೈಸೂರು ಕಡೆಯ ರಸ್ತೆಯಲ್ಲಿ ಬಲದಂಡೆಯ ಕಾವೇರಿನದಿಯ ದಡದಲ್ಲೇ ಹೆದ್ದಾರಿಯಲ್ಲೇ 22 ಅಡಿ ಎತ್ತರದಲ್ಲಿ ನೈಜ ಮಾಟಿಜ್ ಕಾರನ್ನೇ ನಿಲ್ಲಿಸಿದ್ದಾರೆ. ಅದೇ ಒಂದು ಆಕರ್ಷಣೆ. ಅದರ ಮಾರ್ಗದಲ್ಲೇ ಪ್ರವೇಶಿಸಿದಂತೆ ಪಾರಂಪರಿಕವಾಗಿ ಕಾಣುವ ಗಿಡ–ಮರಗಳು ನಮ್ಮನ್ನು ಆಕರ್ಷಿಸುತ್ತವೆ.

ಇಲ್ಲಿ ಕಾಫಿ ಕುಡಿದು ಹಳೆಯ ವಸ್ತುಗಳ ಬಳಕೆಯ ಕಲೆ ನೋಡಿ ತಮ್ಮ ಮನೆಗಳಲ್ಲೂ  ಹಳೆಯ ವಸ್ತುಗಳನ್ನು ತ್ಯಾಜ್ಯವೆಂದು ಎಸೆಯದೆ ಅಲಂಕಾರಿಕವಾಗಿ ಕಲಾರೀತಿಯಲ್ಲಿ ಮರುಬಳಕೆ ಮಾಡಬಹುದೆಂದು ನಮಗೂ ಅನಿಸುತ್ತದೆ.

ಈ ಕೆಫೆ ಕೇವಲ ಒಂದು ಹೋಟೆಲ್ ಅಲ್ಲ, ಕಲಾಗಾರವೇ ಸರಿ. ಹಳೆಯ ವಸ್ತುಗಳ ಮರುಬಳಕೆಯ ಸಂದೇಶವನ್ನು ತಿಳಿಸಿಕೊಡುವುದರ ಜತೆಗೆ ಕಲೆಯ ಆಸ್ವಾದನೆಗೂ ದಾರಿ ಮಾಡಿಕೊಡುತ್ತದೆ. ಇತ್ತೀಚೆಗೆ ಬಿಡುಗಡೆಯಾಗಿದ್ದ ಕನ್ನಡ ಚಿತ್ರ ‘ಬ್ರಹ್ಮವಿಷ್ಣು ಮಹೇಶ್ವರ’ ದ ಮೂವರು ಪ್ರಮುಖ ನಟರಲ್ಲಿ ಒಬ್ಬರಾದ ಪ್ರೀತಮ್ ಈ ಕಲಾಕೆಫೆಯ ನೇತೃತ್ವ ವಹಿಸಿದ್ದಾರೆ. ಉಮೇಶ್ (ಉಮಿ) ಹಾಗೂ ಶ್ರೇಯಸ್ ಅವರ ಬುದ್ಧಿವಂತಿಕೆಯಿಂದ ಗ್ಯಾರೇಜ್‌ನಲ್ಲಿ ಬಿದ್ದಿರುವ ವಾಹನಗಳ ಬಿಡಿಭಾಗಗಳೇ ಕಲೆಯ ಬಲೆಯಾಗಿ ಇಲ್ಲಿ ಅರಳಿವೆ. ■